ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಫಿರ್ಯಾದುದಾರರ ಪರ ಶ್ರೀ ವಿ ವಿ ವಕೀಲರಿಂದಃ**

ನಿಪಿ1 ನಿಮಗೆ ಸೇರಿರುವ ಚೆಕ್ ಎಂದರೆ ಸರಿ. ನಿಪಿ1(ಎ) ಸಹಿ ನನ್ನದಲ್ಲ. ಸಾಕ್ಷಿಗೆ ತಾನು ಸಲ್ಲಿಸಿರುವ ವಕಾಲತ್ ತೋರಿಸಿ ಅದರ ಮೇಲಿನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಗೆ ತಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಇರುವ ಸಹಿ ಹಾಗೂ ನಿಪಿ1(ಎ) ಎರಡೂ ಒಂದೇ ಸಹಿ ಎಂದರೆ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಿಃ26.07.2023 ರಂದು ಇಟ್ಟಿಗೆ ಫ್ಯಾಕ್ಟರಿಯನ್ನು ಅಭಿವೃದ್ಧಿಪಡಿಸಲು ಫಿರ್ಯಾದಿಯಿಂದ 5 ಲಕ್ಷ ಹಣವನ್ನು ಸಾಲವಾಗಿ ಪಡೆದಿರುತ್ತೀರಿ ಹಾಗೂ ಅದನ್ನು ಮರುಪಾವತಿಸಲು ನಿಪಿ1 ನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ ದೂರುದಾರರು ಯಾರು ಎನ್ನುವ ವಿಷಯವೇ ಗೊತ್ತಿಲ್ಲ. ನನಗೆ ದೂರುದಾರರ ಪರಿಚಯವಿಲ್ಲ. ನನಗೆ ಒಂದೂವರೆ ವರ್ಷದ ಹಿಂದೆ ದೂರುದಾರರ ಪರಿಚಯ ಚಂದ್ರಶೇಖರ್ ರವರ ಮೂಲಕ ಆಗಿರುತ್ತದೆ. ನನಗೆ ನಿಖರವಾದ ವರ್ಷ ಹಾಗೂ ತಿಂಗಳು ನೆನಪಿಲ್ಲ. ನೀವು ನೀಡಿದ್ದ ಚೆಕ್ಕನ್ನು ದೂರುದಾರರು ಬ್ಯಾಂಕ್ ಗೆ ಸಲ್ಲಿಸಿದಾಗ ಸದರಿ ಚೆಕ್ಕು ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಹಿಂದಿರುಗಿರುತ್ತದೆ, ಈ ವಿಚಾರವನ್ನು ದೂರುದಾರರು ನಿಮಗೆ ತಿಳಿಸಿದರು ಎಂದರೆ ಸರಿ. ನೀವು ಹಣವನ್ನು ಪಾವತಿಸಿಲ್ಲದ ಕಾರಣ ನಿಮಗೆ ವಕೀಲರ ಮೂಲಕ ನೋಟಿಸ್ಸನ್ನು ಜಾರಿ ಮಾಡಿದರು ಎಂದರೆ ಸರಿ. ನಾನು ಸದರಿ ನೋಟಿಸ್ಸ್ ಗೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ, ನಾನು ಈ ವಿಚಾರವಾಗಿ ಚಂದ್ರಶೇಖರ್ ರವರೊಂದಿಗೆ ಮಾತನಾಡಿರುತ್ತೇನೆ. ನಾನು ನನ್ನ ಪ್ರಮಾಣಪತ್ರದಲ್ಲಿ ನನ್ನ ಹಾಗೂ ಚಂದ್ರಶೇಖರ್ ರವರ ನಡುವೆ ಇಟ್ಟಿಗೆ ಉತ್ಪಾದನೆಗೆ ಸಂಬಂಧಪಟ್ಟಂತೆ ವ್ಯವಹಾರ ಇದ್ದ ಬಗ್ಗೆ ಹೇಳಿದ್ದು ಈ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಚಂದ್ರಶೇಖರ್ ರವರಿಗೆ ಸಹಿ ಮಾಡದೇ ಖಾಲಿ ಚೆಕ್ಕುಗಳನ್ನು ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

ಒಬ್ಬ ವ್ಯಕ್ತಿಗೆ ಖಾಲಿ ಚೆಕ್ಕನ್ನು ನೀಡುವುದು ಕಾನೂನಿನ ಅಡಿಯಲ್ಲಿ ತಪ್ಪು ಎಂದರೆ ಸಾಕ್ಷಿ ಅವರ ಮೇಲೆ ನಂಬಿಕೆ ಇದ್ದ ಕಾರಣ ನಾನು ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನನಗೆ ನೋಟಿಸ್ ಬಂದ ನಂತರ ಚಂದ್ರಶೇಖರ್ ರವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಚಂದ್ರಶೇಖರ್ ರವರನ್ನು ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನೋಡಬೇಕು

ಎಂದು ಉತ್ತರಿಸುತ್ತಾರೆ. ಶಂಕರೇಗೌಡ, ಕೃಷ್ಣೇಗೌಡ ನಿಮ್ಮ ಸ್ನೇಹಿತರು ಹಾಗೂ ಅವರು ದೂರುದಾರರಿಗೆ ಪರಿಚಯವಿಲ್ಲ ಎಂದರೆ ಸರಿ. ನಾನು ಯಾರಿಗಾದರೂ ಚೆಕ್ಕನ್ನು ನೀಡಿದರೆ ಅದರ ಬಗ್ಗೆ ನಮೂದು ಮಾಡಿಕೊಂಡು ಇಟ್ಟುಕೊಳ್ಳುವ ಯಾವುದೇ ಅಭ್ಯಾಸ ಇರುವುದಿಲ್ಲ. ನಾನು ಇಲ್ಲಿಯವರೆಗೂ ಯಾರಿಗೂ ಚೆಕ್ಕನ್ನು ನೀಡಿರುವುದಿಲ್ಲ. ಚಂದ್ರಶೇಖರ್ ರವರು ಚೆಕ್ಕನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಅವರ ಮೇಲೆ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ದೂರುದಾರರ ವಿರುದ್ಧ ದೂರನ್ನು ಸಲ್ಲಿಸಲು ಠಾಣೆಗೆ ಹೋಗಿದ್ದೆ, ಆದರೆ ಪ್ರಕರಣ ಇದ್ದ ಕಾರಣ ಠಾಣೆಯವರು ದೂರನ್ನು ಸ್ವೀಕರಿಸಲಿಲ್ಲ. ನಾನು ಠಾಣೆಗೆ ಹೋದ ಬಗ್ಗೆ ಯಾವುದೇ ಹಿಂಬರಹ ಇರುವುದಿಲ್ಲ. ನಿಪಿ1 ರಲ್ಲಿ ಇರುವ ಸಹಿಯಲ್ಲಿ ವ್ಯತ್ಯಾಸವಿದ್ದರೆ ಬ್ಯಾಂಕ್ ನಲ್ಲಿ ಸಹಿ ವ್ಯತ್ಯಾಸವಿದೆ ಎಂಬ ಹಿಂಬರಹ ನೀಡುತ್ತಿದ್ದರೆ ಎಂದರೆ ಸಾಕ್ಷಿ ನೀಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಸಹಿ ಸರಿ ಇದ್ದ ಕಾರಣ ಬ್ಯಾಂಕ್ ನವರು ಕೇವಲ ಖಾತೆಯಲ್ಲಿ ಹಣವಿಲ್ಲ ಎಂದು ಮಾತ್ರ ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿ ಸಹಿ ನನ್ನದಲ್ಲ ಎಂದು ಉತ್ತರಿಸುತ್ತಾರೆ. ಚಂದ್ರಶೇಖರ್ ರವರ ಬಳಿ ಈ ಚೆಕ್ಕಿನ ವಿಚಾರವಾಗಿ ಮಾತುಕತೆ ಮಾಡಿ ರಾಜಿ ಮಾಡಿಕೊಳ್ಳಲು, ನೋಟಿಸ್ ಬಂದ ನಂತರ ಮಾತನಾಡಿರುತ್ತೇವೆ. ದೂರುದಾರರೂ ಸಹ ಆ ದಿನ ಇದ್ದರು. ಸದರಿ ದಿನದಂದು ಯಾವುದೇ ಬರವಣಿಗೆಯಲ್ಲಿ ರಾಜಿ ಸಂಧಾನ ಆಗಿರುವುದಿಲ್ಲ. ಮುಂದುವರಿದು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಚಂದ್ರಶೇಖರ್ ರವರು ಸರಿಪಡಿಸುತ್ತೇನೆ ಎಂದು ಹೇಳಿದ ಕಾರಣ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನೀವು ದೂರುದಾರರಿಂದ 5 ಲಕ್ಷ ಹಣವನ್ನು ಪಡೆದಿರುತ್ತೀರಿ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಕಥೆಯನ್ನು ಸೃಷ್ಟಿಸುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೂ ಹಾಗೂ ಚಂದ್ರಶೇಖರ್ ರವರಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನೀವು ದೂರುದಾರರಿಂದ ಹಣ ಪಡೆದು ನಿಪಿ1 ರಂತೆ ಚೆಕ್ಕನ್ನು ನೀಡಿ ದೂರುದಾರರಿಗೆ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ1(ಎ)ರ ಸಹಿ ನಿಮ್ಮದೇ, ನೀವು ನಿಮ್ಮದಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಖಾತೆಯನ್ನು ತೆರೆಯುವ ಸಮಯದಲ್ಲಿ ಬ್ಯಾಂಕ್ ಗೆ ಮಾದರಿ ಸಹಿಯನ್ನು ನೀಡಿರುತ್ತೀರಿ, ಅದನ್ನು ತರಿಸಿ ನಿಪಿ1(ಎ) ಜೊತೆ ತಾಳೆ ಮಾಡಿಸಲು ಮ್ಯಾನೇಜರ್ ನ್ನು ಕರೆಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ದೂರುದಾರರಿಗೆ ಹಣ ನೀಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.